# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 225 (251) |
| ಸದಸ್ಯರ ಹೆಸರು | : ಶ್ರೀ ಬಿ.ಜಿ. ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 28.01.2026 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದ ಜಮೀನಿನಲ್ಲಿ ತೊಗರಿ ಹಾನಿಯಾಗಿದೆ ಹಾಗೂ ಪರಿಹಾರಕ್ಕಾಗಿ ಎಷ್ಟು ಕೋಟಿ ನಿಗಧಿಯಾಗಿದೆ ನಿಗದಿಯಾದ ಮೊತ್ತದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ; | ಕಲಬುರಗಿ ಜಿಲ್ಲೆಯ ಕಾಳಗಿ ತಾಲ್ಲೂಕಿನಲ್ಲಿ ಅತಿವೃಷ್ಟಿ ಹಾಗೂ ಬೆಣ್ಣೆತ್ತೋರ ಜಲಾಶಯದಿಂದ ಮತ್ತು ಕಾಗಿಣಾ ನದಿಯ ಪ್ರವಾಹದಿಂದಾಗಿ ಒಟ್ಟು 19345 ಹೆಕ್ಟರ್ ಪ್ರದೇಶದಲ್ಲಿ ತೊಗರಿ ಬೆಳೆ ಹಾನಿಯಾಗಿರುತ್ತದೆ. SDRF/ NDRF ಮಾರ್ಗಸೂಚಿನ್ವಯ (ಮಳೆಯಾಶ್ರಿತ ಬೆಳೆಗೆ ಪ್ರತಿ ಹೆಕ್ಟರ್ ರೂ. 8500, ನೀರಾವರಿ ಬೆಳೆಗೆ ಪ್ರತಿ ಹೆಕ್ಟೇರ್ ಗೆ ರೂ. 17,000, ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್ ಗೆ ರೂ. 22,500).<br><br>ಮೊದಲನೇ ಹಂತದಲ್ಲಿ ಒಟ್ಟು 23742 ಅರ್ಹ ರೈತ ಫಲಾನಿಭವಿಗಳಿಗೆ ಒಟ್ಟು ರೂ. 20.20 ಕೋಟಿ ಪರಿಹಾರ ವಿತರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಕಂಇ 495 ಟಿಎನ್‌ಆರ್ 2025, ದಿನಾಂಕ: 25.11.2025 ರನ್ವಯ ಹೆಚ್ಚುವರಿ ಪರಿಹಾರ (ಪ್ರತಿ ಹೆಕ್ಟೇರ್ ಗೆ ರೂ.8500/- ರಂತೆ) ಒಟ್ಟು 23742 ಅರ್ಹ ರೈತ ಫಲಾನಿಭವಿಗಳಿಗೆ ರೂ. 20.14 ಕೋಟಿಗಳನ್ನು ಎರಡನೇ ಹಂತದಲ್ಲಿ ಪಾವತಿಸಲಾಗಿದೆ. ಹೀಗೆ ಒಂದು ಮತ್ತು ಎರಡನೇ ಹಂತದಲ್ಲಿ 23742 ಅರ್ಹ ರೈತ ಫಲಾನಿಭವಿಗಳಿಗೆ ಒಟ್ಟು ರೂ. 40.34 ಕೋಟಿಗಳು ನೇರವಾಗಿ ಆಧಾರ ಸಂಖ್ಯೆಗೆ ಜೋಡಣೆ ಹೊಂದಿರುವ ಸಂಬಂಧಪಟ್ಟ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 22 ಟಿಎಸ್‌ವೈ 2025, ದಿನಾಂಕ:18.08.2025, 11.11.2025, ಮತ್ತು 15.11.2025 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಕಂಇ 495 ಟಿಎನ್‌ಆರ್ 2025, ದಿನಾಂಕ: 25.11.2025 ರನ್ವಯ ಸರ್ಕಾರದಿಂದ ಜಿಲ್ಲಾಡಳಿತಕ್ಕೆ ಅನುದಾನ ಬಿಡುಗಡೆಯಾಗಿರುತ್ತದೆ. |
| ಆ. | ಎಷ್ಟು ರೈತರಿಗೆ ಒಂದೇ ಭಾರಿಗೆ ಸಂಪೂರ್ಣ ಪರಿಹಾರ ನೀಡಲಾಗಿದೆ ಎಷ್ಟು ನೀಡದಿದ್ದಲ್ಲಿ ಕಾರಣವೇನು; ಹಾಗೂ ಸರ್ಕಾರದಿಂದ ಜಿಲ್ಲಾಡಳಿತಕ್ಕೆ ಪರಿಹಾರ ಹಣ ಯಾವಾಗ ಬಿಡುಗಡೆಯಾಯಿತು. (ದಿನಾಂಕ ಮಾಹೆವಾರು ವಿವರ ನೀಡುವುದು) | |

| | | |
|---|---|---|
| ಇ. | ಮೇಲ್ಕಂಡ ತಾಲ್ಲೂಕಿನಲ್ಲಿ ಬೆಳೆ ನಷ್ಟ ನೋಂದಣಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ನಿರ್ಲಕ್ಷ್ಯದಿಂದ ಹೆಚ್ಚು ಬೆಳೆ ಕಡಿಮೆ ಪರಿಹಾರ ನಷ್ಟವಾಗಿದ್ದರೂ ಬಂದಿದೆಯೆಂದು ರೈತರು ದೋಷಿಸುತ್ತಿದು, ಲೋಪ ದೋಷಗಳನ್ನು ಸರಿಪಡಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು? | ಇಂತಹ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. |

ಕಡತ ಸಂಖ್ಯೆ:ಕಂಇ 72 ಟಿಎನ್ಆರ್ 2026

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**